ಫಾಲನೇತ್ರ ಸಜ್ಜನ, ಶಿರಸಿ
◆ ಯಾವ ಭಾಗದಲ್ಲೂ ಕತ್ತಲೆ ಇಲ್ಲದ ದೀಪ ಯಾವುದು?



ವಿದ್ಯೆ.

ತಲಕಾಡು ಶ್ರೀನಿಧಿ, ಬೆಂಗಳೂರು
◆ ತ್ರಿಮಸ್ಥರಿಗೆ ಗುರುಗಳು ಇರುವಂತೆ ಭಿನ್ನಮತದವರಿಗೂ ಇರುವರಾ ರಾಮ್ ಸರ್?
ಇರುತ್ತಾರೆ. ರಕ್ಕಸರಿಗೆ ಶುಕ್ರಾಚಾರ್ಯ ಇರುವಂತೆ ಇವರಿಗೆ ಸಿಲುಕಾಚಾರ್ಯರು, ಶುಲ್ಕಾಚಾರ್ಯರು.

ನರಸಿಂಹ ಪೈ, ಹೊನ್ನಾವರ
◆ ವಿಜ್ಞಾನದ ಕೊಡುಗೆಗಳು ವಿಶ್ವಕ್ಕೆ ವರವೋ, ಶಾಪವೋ?
ವಿವೇಕಿಗಳಿಗೆ ವರ; ಶ್ವಪಚಮತಿ(ಕೊಳಕುಬುದ್ಧಿ) ಯವರಿಗೆ ಶಾಪ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
◆ ನಾವು ಕೇಳದೆ ಸಿಗುವ ವರ ಯಾವುದು?



ಪರಿಸರ.

ಕುಮಾರ ಚಲವಾದಿ, ಹಾಸನ
◆ ನೀವೂ ವಾರ ಭವಿಷ್ಯ, ಮಾಸ ಭವಿಷ್ಯ ನೋಡುತ್ತಿರುತ್ತೀರಾ?
ನೋಡುತ್ತಿರುತ್ತೇನೆ. ಅವು ನೋಡಕ್ಕಷ್ಟೇ ಲಾಯಕ್ಕು; ಓದಲಿಕ್ಕೆ, ನಂಬಲಿಕ್ಕೆ ಅಲ್ಲ.

ಗಣೇಶ ಎಂ. ಪೈ, ಬೆಂಗಳೂರು
◆ ಪ್ರಮುಖ ರಾಜಕಾರಣಿಗಳು ತಮ್ಮ ಹೆಂಡತಿ ಹಾಗೂ ಮಕ್ಕಳಿಂದಲೇ ಸಾಲ ಪಡೆಯಲು ಕಾರಣವೇನು?
ಅವರ ಯೋಗ್ಯತೆಗೆ ಇನ್ಯಾರೂ ಬಿಡಿಗಾಸೂ ಕೊಡುವುದಿಲ್ಲವಾದ್ದರಿಂದ.

ಮೋಹನರಾಜು ಎಸ್.ಎ. ಶಿವಮೊಗ್ಗ
◆ ನವದಂಪತಿಗಳಿಗೆ ಮಧುಚಂದ್ರ. ಯುವ ದಂಪತಿಗಳಿಗೆ?
ಅವಳಿಗಿವನು ಬಾಲಸೂರ್ಯ; ಇವನಿಗವಳು ಪೂರ್ಣಚಂದ್ರ.

ಜಿ.ಆರ್.ಆದಿನಾರಾಯಣಮುನಿ, ಬೆಂಗಳೂರು
◆ ನಮ್ಮ ಮತ್ತು 'ಸುಧಾ'ದ್ದು ಯಾವ ಜನ್ಮದ ಮೈತ್ರಿ?
ದ್ವಾಪರದ್ದು. ಅಂದು ನಾನು ಯಕ್ಷ; ನೀವು ಧರ್ಮರಾಯ. ಈಗ ರೋಲ್ಸ್ ರಿವರ್ಸ್ಡ್.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
◆ ಪುಣ್ಯಕ್ಷೇತ್ರಗಳಿಗೆ ಹೋಗಿ ಬಂದು ಮತ್ತೆ ಪಾಪ ಮಾಡುತ್ತಾರಲ್ಲಾ....?
ಮತ್ತೆ ಅದೇ ಕ್ಷೇತ್ರವನ್ನು ನೋಡಬೇಕೆನಿಸುತ್ತದಲ್ಲ; ಅಲ್ಲಿಗೆ ಹೋಗಲು ಕ್ವಾಲಿಫಿಕೇಷನ್ನೇ ಪಾಪ.

ಕೆ.ಜಿ. ಶೇಖರಪ್ಪ, ಅರಸೀಕೆರೆ
◆ ಚುನಾವಣೆ ಬಂದಾಗ ಮದ್ಯದ ಅಂಗಡಿಗಳನ್ನು ಬಂದ್ ಮಾಡುವುದರಿಂದ ಪ್ರಯೋಜನವೇನು ಸಾರ್?
ಪ್ರಯೋಜನವಲ್ಲ, ಅನಿವಾರ್ಯ. ವೋಟರ್‌ಗೆ ಹಂಚಲು ಲೀಡರ್ ಸ್ಟಾಕ್ ಸಂಗ್ರಹಿಸುವುದರಿಂದ ಅಂಗಡಿಯಲ್ಲಿ ಸ್ಟಾಕ್ ಇರಲ್ಲ.

ಪಿ.ಎನ್. ಶ್ರೀವತ್ಸ, ಬೆಂಗಳೂರು
◆ ಸತ್ತವರ ಫೋಟೊಗಳನ್ನು 'ಭಾವಪೂರ್ಣ ಶ್ರದ್ಧಾಂಜಲಿ' ಎಂದು ಬರೆದು ಮರ, ಲೈಟ್‌ಕಂಬಗಳಿಗೆ ತೂಗುಹಾಕುವುದೇಕೆ?
ಅವರನ್ನೇ ನೇತುಹಾಕಬೇಕೆಂದಿದ್ದರಂತೆ. ಹಾಗೆ ಮಾಡಿದರೆ ಶಿಕ್ಷೆ ಆಗುವುದರಿಂದ ಇವನ್ನು ನೇತುಹಾಕಿದ್ದಾರಂತೆ.

ಮಂಜುನಾಥ ಎಸ್. ಬೆಂಗಳೂರು
◆ ಹಿಂದಿನ ಕಾಲದಲ್ಲಿ ಋಷಿಗಳು ಹಲ್ಲುಗಳನ್ನು ಉಜ್ಜಲು ಏನನ್ನು ಉಪಯೋಗಿಸುತ್ತಿದ್ದರು ಸಾರ್?
ಜಡ್ಡುಗಟ್ಟಿ ಬ್ರಶ್‌ನಷ್ಟೇ ಗಟ್ಟಿಯಾಗಿದ್ದ ಉದ್ದಗಡ್ಡವೇ ಸಾಕಾಗಿತ್ತು ಎನಿಸುತ್ತದೆ.

## ಬಹುಮಾನಿತ ಪ್ರಶ್ನೆ

ಎಚ್. ಆನಂದಕುಮಾರ್, ಚಿತ್ರದುರ್ಗ
◆ ರಾಹುಕಾಲ, ಗುಳಿಕಕಾಲ, ಈ ಕಾಲ, ಆ ಕಾಲ ಎನ್ನುತ್ತಾರಲ್ಲ, ಆಕ್ಸಿಡೆಂಟ್‌ಗಳಿಗೆ ಅದ್ಯಾವ ಕಾಲ?
ನರ್ಸಿಂಗ್ ಹೋಂಗಳಿಗೆ ಶುಭಕಾಲ, ಇನ್ಶೂರೆನ್ಸ್ ಕಂಪನಿಗೆ ಯಮಗಂಡ ಕಾಲ.

ಅಕ್ಷಯ ಜೈನ್, ಹೂವಿನಹಡಗಲಿ
◆ ಕೋಮ, ಕೋಮ, ಕೋಮ 'ರಾಮ್' ಎಂದು ಹಾಡಲೆ?
ಬೇಡ. ಚುರುಕಾದ ಪ್ರಶ್ನೆಯಿಂದ ಚುಚ್ಚಿ. ಕೂಡಲೆ ಕೋಮಾದಿಂದ ಹೊರಬರುತ್ತೇನೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
◆ ದಿನಾ ಸತ್ತು ಸತ್ತು ಬದುಕುವುದಕ್ಕಿಂತ ಒಂದೇ ಸಾರಿ ಸಾಯುವುದು ಒಳ್ಳೆಯದಲ್ಲವೆ?
ಆಮೇಲೆ ಬದುಕಲಾಗದಲ್ಲ; ಬದಲಿಗೆ ಬದುಕಿ ಬದುಕಿ ಸಾಯುವುದನ್ನು ರೂಢಿ ಮಾಡಿಕೊಳ್ಳಿ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
◆ ಧೃತರಾಷ್ಟ್ರನಿಗೇನೋ ಕಣ್ಣು ಇರಲಿಲ್ಲ. ಗಾಂಧಾರಿ ಏಕೆ ಕಣ್ಣಿಗೆ ಪಟ್ಟಿ ಕಟ್ಟಿಕೊಂಡಳು?



ಕಟ್ಟಿಕೊಳ್ಳದಿದ್ದರೆ ಸಂಜಯನಂತೆ ಜೀವನವಿಡೀ ಒಂದಲ್ಲ ಒಂದರ ಕಾಮೆಂಟ್ರಿ ಹೇಳಬೇಕಾಗಿ ಬರುತ್ತಿತ್ತಲ್ಲ.

ಹಾಡ್ಯ ಬ. ಜಯಾನಂದ, ಮೈಸೂರು
◆ ಕ್ರಿಕೆಟ್ ಕ್ಯಾಪ್ಟನ್‌ಗೂ, ಸೇನೆಯ ಕ್ಯಾಪ್ಟನ್‌ಗೂ ಏನು ವ್ಯತ್ಯಾಸ?
ಒಬ್ಬರು ಚೆಂಡನ್ನು ಆಡುತ್ತಾರೆ. ಇನ್ನೊಬ್ಬರು ಚೆಂಡಾಡುತ್ತಾರೆ.

ಗಂಜಾಂ ನಾಗರಾಜ, ಮೈಸೂರು
◆ ಮಾತೃ ದೇವೋಭವ; ಪಿತೃ ದೇವೋಭವ. ಪತ್ನಿ....?
ದ್ವೇ ದ್ವೇ ಭವಂತು ಎಂದು ಆಸೆ ಇರುತ್ತದೆ, ಅವಕಾಶ ಇರುವುದಿಲ್ಲ.

■ ರಾಮ್